

بسم اللہ الرّحمٰن الرّحیم

# ಪ್ರವಾದಿ ಚರಿತ್ರೆ – ಬದ್ರ್ ಯುದ್ಧಾನಂತರದ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–11–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರ‌ತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಖುತ್ಬದ ಕೊನೆಯಲ್ಲಿ ಹಝ್ರ‌ತ್ ಪೈಗಂಬರ್(ಸ)ರ ಜೀವನ ಚರಿತ್ರೆಗೆ ಸಂಬಂಧಿಸಿ ಪ್ರಸ್ತಾಪಿಸಲಾಗಿದ್ದ ಭಾಗದಲ್ಲಿ ಫರಾತ್ ಬಿನ್ ಹಯಾನ್ ಮುಸ್ಲಿಮ್ ಆದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಅದರ ಹೆಚ್ಚಿನ ವಿವರಣೆ ಹೀಗಿದೆ: ಅವರು ಬಂಧಿಯಾಗಿ ಕೈದಿಗಳಲ್ಲಿ ಇದ್ದರು. ಬದ್ರ್ ಯುದ್ಧದಂದು ಕೂಡ ಅವರು ಗಾಯಾಳು ಆಗಿದ್ದರು. ಆದರೆ ಹೇಗೋ ಅವರು ಬಂಧನದಿಂದ ಪರಾರಿಯಾಗಿದ್ದರು. ಅವರನ್ನು ನೋಡುತ್ತಲೇ ಹಝ್ರ‌ತ್ ಅಬೂಬಕರ್(ರ) ಹೇಳಿದರು: ಈಗಲಾದರೂ ನಿನ್ನ ವರ್ತನೆಯನ್ನು ಬದಲಾಯಿಸು ಮತ್ತು ಮುಸ್ಲಿಮನಾಗು. ಹೀಗೆ ಅವರು ಹಝ್ರ‌ತ್ ಪೈಗಂಬರ್(ಸ)ರ ಬಳಿಗೆ ಹೊರಟರು ಮತ್ತು ಒಬ್ಬ ಅನ್ಸಾರಿ ಸಹೋದರನ ಸಮೀಪದಿಂದ ದಾಟುತ್ತಾ "ನಾನು ಮುಸ್ಲಿಮನು" ಎಂದು ಹೇಳಿದರು. ಅವರು ಇಸ್ಲಾಂ ಸ್ವೀಕಾರ ಮಾಡಿದ್ದಾರೆ ಎಂದು ಆ ಅನ್ಸಾರಿ ಹಝ್ರ‌ತ್ ಪೈಗಂಬರ್(ಸ)ರೊಡನೆ ಹೇಳಿದರು. ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಆತ ಇಸ್ಲಾಂ ಸ್ವೀಕಾರ ಮಾಡಿದ್ದಾನೆ ಎಂದು ಹೇಳುತ್ತಿರುವನಾದರೆ ಅದು ಆತನ ಮತ್ತು ಅಲ್ಲಾಹನ ನಡುವಿನ ವಿಷಯವಾಗಿದೆ. ಈ ಕಾರಣದಿಂದ ಹಝ್ರ‌ತ್ ಪೈಗಂಬರ್(ಸ) ಅವರನ್ನು ಬಿಡುಗಡೆಗೊಳಿಸಿದರು.

ಘಟನೆಗಳಲ್ಲಿ ಹಝ್ರ‌ತ್ ಝೈದ್ ಬಿನ್ ಹಾರಿಸರ ಕಾರ್ಯಾಚರಣೆಯ ಬಗ್ಗೆ ಒಂದು ಪ್ರಸ್ತಾಪವಿದೆ. ಆ ಸೈನ್ಯವನ್ನು ಹಿಜರೀ 3, ಜಮಾದಿಯುಲ್ ಆಖಿರ್‌ನಲ್ಲಿ ಖರದ ಎಂಬ ಪ್ರದೇಶಕ್ಕೆ ಕಳುಹಿಸಲಾಗಿತ್ತು. ಈ ಘಟನೆಯನ್ನು ಹಝ್ರ‌ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆದಿರುವರು: ಬನೂ ಸುಲೈಂ ಮತ್ತು ಬನೂ ಗ಼ತ್‌ಫಾನ್‌ರ ದಾಳಿಗಳಿಂದ ಸ್ವಲ್ಪ ಬಿಡುವು ಸಿಕ್ಕಿದಾಗ ಮತ್ತೊಂದು ಅಪಾಯವನ್ನು ತಡೆಯಲಿಕ್ಕಾಗಿ ಮುಸ್ಲಿಮರಿಗೆ ಸ್ವದೇಶದಿಂದ ಹೊರಡಬೇಕಾಗಿ ಬಂತು. ಅಲ್ಲಿಯ ವರೆಗೂ ಖುರೈಶಿಯರು ತಮ್ಮ ವ್ಯಾಪಾರಕ್ಕಾಗಿ ಹಿಜಾಝಿನ ತೀರ ಪ್ರದೇಶದ ಮಾರ್ಗದಿಂದ ಸಿರಿಯದ ಕಡೆಗೆ ಹೋಗುತ್ತಿದ್ದರು. ಆದರೆ ಅವರು ಈ ಮಾರ್ಗವನ್ನು ಉಪೇಕ್ಷಿಸಿದರು. ಏಕೆಂದರೆ ಆ ಪ್ರದೇಶದ ಗೋತ್ರಗಳು ಮುಸ್ಲಿಮರ ಮಿತ್ರರಾಗಿ ಬಿಟ್ಟಿದ್ದರು. ಆದ್ದರಿಂದ ಅವರು ನಜದಿನ ಮಾರ್ಗವನ್ನು ಕೈಗೊಂಡರು. ಅದು ಇರಾಕಿಗೆ ತಲುಪುವ ಮಾರ್ಗವಾಗಿತ್ತು. ಅದರ ಆಸುಪಾಸಿನಲ್ಲಿ ಮುಸ್ಲಿಮರ ಪರಮ ಶತ್ರುಗಳಾದ ಸುಲೈಂ ಮತ್ತು ಗ಼ತ್‌ಫಾನ್ ಗೋತ್ರಗಳು ನೆಲೆಸಿದ್ದುವು. ಖುರೈಶಿನ ಒಂದು ಸಂಘ ನಜದಿನ ಮಾರ್ಗವಾಗಿ ದಾಟಿ ಹೋಗುವುದು ಎಂಬ ಮಾಹಿತಿ ಹಝ್ರ‌ತ್ ಪೈಗಂಬರ್(ಸ)ರಿಗೆ ಜಮಾದಿಯುಲ್ ಆಖಿರ್‌ನ ತಿಂಗಳಲ್ಲಿ ಲಭಿಸಿತು. ಈ ಸುದ್ದಿ ಹಝ್ರ‌ತ್ ಪೈಗಂಬರ್(ಸ)ರಿಗೆ ಲಭಿಸಿದ ಕೂಡಲೇ ಝೈದ್ ಬಿನ್ ಹಾರಿಸ್(ರ)ರ ನೇತೃತ್ವದಲ್ಲಿ ಒಂದು ಸೈನ್ಯದ ತುಕಡಿಯನ್ನು ಅವರು ಕಳುಹಿಸಿದರು. ಝೈದ್(ರ) ಬಹಳ ಬುದ್ಧಿಪೂರ್ವಕವಾಗಿ ತಮ್ಮ ಕರ್ತವ್ಯವನ್ನು ಈಡೇರಿಸಿದರು. ನಜದಿನ ಪ್ರದೇಶವಾದ ಖರದದಲ್ಲಿ ಆ ಸಂಘದ ಮೇಲೆ ದಾಳಿ ನಡೆಸಿದರು. ಈ ಅಚಾನಕ್ಕಾದ ದಾಳಿಯಿಂದ ಗಾಬರಿಗೊಂಡು ಖುರೈಶಿನ ಜನರು ಸಂಪತ್ತನ್ನು ಬಿಟ್ಟು ಪರಾರಿಯಾದರು. ಝೈದ್ ಬಿನ್ ಹಾರಿಸ(ರ) ಮತ್ತು ಅವರ ಸಹಚರರು ಬಹಳಷ್ಟು ಯುದ್ಧ ಸಂಪತ್ತಿನ ಜೊತೆಗೆ ಯಶಸ್ವಿವಾಗಿ ಮದೀನಕ್ಕೆ ಮರಳಿ ಹೋದರು.

ಮತ್ತೊಂದು ಘಟನೆ ಕಅ್‌ಬ್ ಬಿನ್ ಅಶ್ರಫಿನ ವಧೆಯ ಕುರಿತಾಗಿದೆ. ಆತನು ಮದೀನದ ಸರದಾರರಲ್ಲಿ ಒಬ್ಬನಾಗಿದ್ದನು ಮತ್ತು ಹಝ್ರ‌ತ್ ಪೈಗಂಬರ್(ಸ)ರ ಒಪ್ಪಂದದಲ್ಲಿ ಪಾಲ್ಗೊಂಡಿದ್ದನು. ಅನಂತರ ಆತನು ಪಿತೂರಿ ಉಂಟುಮಾಡಲು ಪ್ರಯತ್ನಿಸಿದನು. ಆದ್ದರಿಂದ ಹಝ್ರ‌ತ್ ಪೈಗಂಬರ್(ಸ) ಆತನನ್ನು ವಧಿಸಲು ಆದೇಶಿಸಿದರು. ಹಝ್ರ‌ತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವರದಿ ಮಾಡಿದ್ದನ್ನು ಬುಖಾರಿಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಕಅ್‌ಬನನ್ನು ಯಾರು ಎದುರಿಸುವಿರಿ? ಆತನು ಅಲ್ಲಾಹನಿಗೆ ಮತ್ತು ಅಲ್ಲಾಹನ ಪ್ರವಾದಿಗೆ ಬಹಳ ತೊಂದರೆ ಕೊಟ್ಟಿದ್ದಾನೆ. ಮುಹಮ್ಮದ್ ಬಿನ್ ಮಸ್ಲಮ ಎದ್ದು ನಿಂತು ಹೇಳಿದರು – ನಾನು ಆತನನ್ನು ವಧಿಸುವೆನು. ಅವರು ಒಂದು ನೆಪವನ್ನು ಮಾಡಿಕೊಂಡು ಕಅ್‌ಬನ ಬಳಿಗೆ ಹೋದರು ಮತ್ತು ಹೀಗೆ ಹೇಳಿದರು: ಮುಹಮ್ಮದ್(ಸ) ನಮ್ಮಿಂದ ಸದಖಾವನ್ನು ಅವಶ್ಯ ಪಡುತ್ತಿದ್ದಾರೆ, ಹೀಗೆ ನಮ್ಮನ್ನು ಕಷ್ಟತೆಗೆ ಗುರಿಪಡಿಸಿರುವರು. ನಿನ್ನಿಂದ ಸಾಲ ಪಡೆಯಲಿಕ್ಕಾಗಿ ನಾನು ನಿನ್ನ ಬಳಿಗೆ ಬಂದಿರುವೆನು. ಕಅ್‌ಬ್ ಹೇಳಿದನು: ನೀವು ಅವರಿಂದ (ಎಂದರೆ ಹಝ್ರ‌ತ್ ಪೈಗಂಬರ್(ಸ)ರಿಂದ) ವಿಮುಖರಾಗುವ ಮತ್ತು ಅವರನ್ನು ತೊರೆಯುವ ದಿನ ದೂರವಲ್ಲ. ಮುಹಮ್ಮದ್ ಬಿನ್ ಮಸ್ಲಮ(ರ) ಹೇಳಿದರು: ನಾವು ಅವರಿಗೆ ವಿಧೇಯರಾಗಿದ್ದೇವೆ. ಆದ್ದರಿಂದ ನಾವು ಅವರನ್ನು ಉಪೇಕ್ಷಿಸುವಂತಿಲ್ಲ. ಕಅ್‌ಬ್ ಹೇಳಿದನು: ಸಾಲ ಬೇಕಾದರೆ ನಿಮ್ಮ ಮಹಿಳೆಯರನ್ನು ಅಥವಾ ಮಕ್ಕಳನ್ನು ಅಡಮಾನವಾಗಿ ಇರಿಸು. ಮುಹಮ್ಮದ್ ಬಿನ್ ಮಸ್ಲಮ(ರ) ಹೇಳಿದರು: ಅದು ಸಾಧ್ಯವಲ್ಲ. ಬೇಕಾದರೆ ನಾವು ನಮ್ಮ ಯುದ್ಧ ಸಾಮಗ್ರಿಗಳನ್ನು ಗಿರವಿಯಾಗಿ ಇರಿಸುವೆವು. ಇದನ್ನು ಕಅ್‌ಬ್ ಒಪ್ಪಿದನು. ರಾತ್ರಿಯಾದಾಗ ಅವರು ಮರಳಿ ಕಅ್‌ಬ್‌ನ ಮನೆಗೆ ಹೋಗಿ ಆತನನ್ನು ಆತನ ಮನೆಯಿಂದ ಹೊರಗೆ ತಂದರು ಮತ್ತು ಅತ್ಯಂತ ಚುರುಕಾಗಿ ಆತನನ್ನು ಹಿಡಿದು ವಧಿಸಿದರು.

ಇದರ ಇನ್ನಷ್ಟು ವಿವರಣೆ ಬುಖಾರಿಯ ವ್ಯಾಖ್ಯಾನ ಗ್ರಂಥವಾದ ಉಮ್ದತುಲ್ ಖಾರಿಯಲ್ಲಿ ಹೀಗಿದೆ: ಮುಹಮ್ಮದ್ ಬಿನ್ ಮಸ್ಲಮ ತನ್ನ ಸಂಗಡಿಗರ ಜೊತೆಗೆ ಕಅ್‌ಬ್‌ನ ಮೇಲೆ ಹಲ್ಲೆ ನಡೆಸಿ ಆತನನ್ನು ವಧಿಸಿದರು. ಅವರ ಒಂದು ಸಂಗಡಿಗರಾದ ಹಝ್ರ‌ತ್ ಹಾರಿಸ್

ಬಿನ್ ಔಸ್‌ರಿಗೆ ಖಡ್ಗದ ತುದಿ ತಗುಲಿ ಅವರು ಗಾಯಗೊಂಡರು. ಜೊತೆಗಿದ್ದ ಸಂಗಡಿಗರದ್ದೇ ಖಡ್ಗದ ತುದಿ ತಗುಲಿ ಅವರು ಗಾಯಾಳಾಗಿದ್ದರು. ಹೀಗೆ ಅವರ ಜೊತೆಗಾರರು ಅವರನ್ನು ಎತ್ತಿ ಬೇಗನೇ ಮದೀನಕ್ಕೆ ತಲುಪಿದರು ಮತ್ತು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರ್(ಸ) ತನ್ನ ಉಗುಳನ್ನು ಹಝ್ರತ್ ಹಾರಿಸ್ ಬಿನ್ ಔಸ್(ರ)ರ ಗಾಯದ ಮೇಲೆ ಸವರಿದರು. ಅನಂತರ ಅವರಿಗೆ ಅದರ ನೋವು ಉಂಟಾಗಲಿಲ್ಲ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಕಅ್‌ಬ್‌ನ ಕೊಲೆಯ ಸುದ್ದಿ ಹರಡಿದಾಗ ಯಹೂದಿಯರ ಒಂದು ಸಂಘ ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ದೂರಿದರು: ನಮ್ಮ ಸರದಾರ ಹೀಗೆ ವಧಿಸಲ್ಪಟ್ಟಿರುವನು. ಹಝ್ರತ್ ಪೈಗಂಬರ್(ಸ) ಕಅ್‌ಬ್‌ನ ಒಪ್ಪಂದದ ಉಲ್ಲಂಘನೆ, ಯುದ್ಧಕ್ಕಾಗಿ ಹುರಿದುಂಬಿಸಿದ್ದು, ಪಿತೂರಿ, ಬೈಗುಳ ಮತ್ತು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಆತನು ಮಾಡಿದ ರಹಸ್ಯ ಕುತಂತ್ರಗಳು ಇತ್ಯಾದಿ ಕೆಲಸಗಳ ಬಗ್ಗೆ ಸಂಕ್ಷೇಪವಾಗಿ ಅವರಿಗೆ ನೆನಪಿಸಿಕೊಟ್ಟರು. ಆಗ ಅವರು ಹೆದರಿ ಸುಮ್ಮನಾದರು. ಅವರ ಒಪ್ಪಿಗೆಯಿಂದಲೇ ಒಂದು ಹೊಸ ಒಪ್ಪಂದವನ್ನು ಬರೆಯಲಾಯಿತು. ಪಿತೂರಿ ಮತ್ತು ಗಲಭೆಗಳ ಮಾರ್ಗಗಳಿಂದ ಬಿಟ್ಟು ನಿಲ್ಲುವುದಾಗಿ ಯಹೂದಿಯರು ಪುನಃ ವಾಗ್ದಾನ ಮಾಡಿದರು. ಅನಂತರ ಎಂದಾದರೂ ಯಹೂದಿಗಳು ಕಅ್‌ಬ್ ಬಿನ್ ಅಶ್ರಫಿನ ಕೊಲೆಯ ಬಗ್ಗೆ ಪ್ರಸ್ತಾಪಿಸಿ ಮುಸ್ಲಿಮರ ಮೇಲೆ ಆರೋಪ ಹೊರಿಸಿದ್ದಾಗಿ ಯಾವುದೇ ಪ್ರಸ್ತಾಪ ಚರಿತ್ರೆಯಲ್ಲಿ ಕಂಡುಬರುವುದಿಲ್ಲ. ಏಕೆಂದರೆ ಕಅ್‌ಬ್ ವಧೆಶಿಕ್ಷೆಗೆ ಅರ್ಹನಾಗಿದ್ದನು ಎಂದು ಅವರಿಗೂ ಅನಿಸುತ್ತಿತ್ತು.

ಒಂದು ಅನ್ಯಾಯವಾದ ಕೊಲೆಯನ್ನು ಹಝ್ರತ್ ಪೈಗಂಬರ್(ಸ) ಮಾಡಿಸಿದ್ದರು ಎಂದು ಕೆಲವು ಚರಿತ್ರೆಗಾರರು ಆರೋಪಿಸುತ್ತಾರೆ. ಆದರೆ ಅದು ಅನ್ಯಾಯವಾದ ಕೊಲೆಯಾಗಿರಲಿಲ್ಲ ಎಂಬುದು ಸ್ಪಷ್ಟ. ಏಕೆಂದರೆ ಕಅ್‌ಬ್ ಬಿನ್ ಅಶ್ರಫ್ ಹಝ್ರತ್ ಪೈಗಂಬರ್(ಸ)ರೊಂದಿಗೆ ಶಾಂತಿಯ ಒಪ್ಪಂದವನ್ನು ಮಾಡಿಕೊಂಡಿದ್ದನು. ಮುಸ್ಲಿಮರ ವಿರುದ್ಧ ಕಾರ್ಯಾಚರಣೆ ಮಾಡುವುದಿಲ್ಲ ಎಂದು ಮಾತ್ರವಲ್ಲ ಹೊರಗಿನ ಶತ್ರುಗಳ ವಿರುದ್ಧ ಮುಸ್ಲಿಮರಿಗೆ ನೆರವು ನೀಡುವೆನು ಮತ್ತು ಮುಸ್ಲಿಮರ ಜೊತೆಗೆ ಗೆಳೆತನದ ಸಂಬಂಧಗಳನ್ನು ಇರಿಸುವೆನು ಎಂದು ಕೂಡ ಆತನು ಪ್ರತಿಜ್ಞೆ ಮಾಡಿದ್ದನು. ಆದರೆ ಆತನು ಮುಸ್ಲಿಮರೊಡನೆ ಮಾಡಿದ ಒಪ್ಪಂದವನ್ನು ಮುರಿದು ದ್ರೋಹ ಮಾಡಿದನು ಹಾಗೂ ಮದೀನದಲ್ಲಿ ಪಿತೂರಿ ಮತ್ತು ಕಲಹದ ಬೀಜವನ್ನು ಬಿತ್ತಿ ಯುದ್ಧದ ಬೆಂಕಿಯನ್ನು ಹೊತ್ತಿಸಲು ಪ್ರಯತ್ನಿಸಿದನು ಹಾಗೂ ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಯೋಜನೆಗಳನ್ನು ಹಾಕಿದನು. ಆತನ ಅಪರಾಧಗಳ ರಾಶಿ ಬಹಳಷ್ಟು ಇದ್ದ ಕಾರಣದಿಂದ ಆತನ ವಿರುದ್ಧ ಶಿಕ್ಷಾ ಕ್ರಮವನ್ನು ಕೈಗೊಳ್ಳಲಾಯಿತು. ಇಂದಿನ ನಾಮಧಾರಿ ನಾಗರಿಕ ದೇಶಗಳಲ್ಲಿ ಕೂಡ ದೇಶದ್ರೋಹ, ಒಪ್ಪಂದದ ಉಲ್ಲಂಘನೆ, ಜನರನ್ನು ಕೆರಳಿಸುವುದು, ಯುದ್ಧದ ಸ್ಥಿತಿ ಉಂಟುಮಾಡುವುದು ಕುತಂತ್ರ ಇತ್ಯಾದಿ ಅಪರಾಧಿಗಳಿಗೆ ಶಿಕ್ಷೆ ನೀಡಲಾಗುತ್ತಿದೆ. ಹೀಗಿರುವಾಗ ಆಕ್ಷೇಪಕ್ಕೆ ಯಾವ ಎಡೆಯಿದೆ? ಇತ್ತೀಚಿಗೆ ಪೆಲಸ್ತೀನ್ ಮತ್ತು ಇಸ್ರೇಲಿನ ನಡುವೆ ಅದಕ್ಕಿಂತಲೂ ಹೆಚ್ಚಿನದು ಆಗುತ್ತಿವೆ. ಅವುಗಳು ಅನೇಕ ರೀತಿಯಲ್ಲಿ ಅನ್ಯಾಯವಾಗಿದೆ.

ಮತ್ತೊಂದು ಪ್ರಶ್ನೆ ಮೌನವಾಗಿ ಮತ್ತು ರಹಸ್ಯವಾಗಿ ಆತನನ್ನು ಕೊಂದು ಹಾಕಿದ ರೀತಿಯ ಬಗ್ಗೆಯಾಗಿದೆ. ಆ ಕಾಲದ ಅರೇಬಿಯದಲ್ಲಿ ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿಯೊಂದು ಗೋತ್ರ ಸ್ವತಂತ್ರ ಮತ್ತು ಸ್ವತಃ ಅಧಿಕಾರವನ್ನು ಹೊಂದಿತ್ತು. ಇಂತಹ ಸ್ಥಿತಿಯಲ್ಲಿ ಕಅ್‌ಬ್‌ನ ವಿರುದ್ಧ ಮೊಕದ್ದಮೆ ಹೂಡಿ ನಿಯಮಿತವಾಗಿ ವಧೆಶಿಕ್ಷೆಯ ಆದೇಶವನ್ನು ಯಾವ ನ್ಯಾಯಾಲಯದಿಂದ ಪಡೆಯಲು ಸಾಧ್ಯವಿತ್ತು? ಒಪ್ಪಂದದ ಪ್ರಕಾರ, ಎಲ್ಲ ಜಗಳಗಳಲ್ಲಿ ಮತ್ತು ರಾಜಕೀಯ ವಿಷಯಗಳಲ್ಲಿ ಸಮಂಜಸವೆಂದು ತೋರುವ ತೀರ್ಪನ್ನು ಹೊರಡಿಸಲು ಹಝ್ರತ್ ಪೈಗಂಬರ್(ಸ)ರಿಗೆ ಅಧಿಕಾರ ನೀಡಲಾಗಿತ್ತು. ಹೀಗಿರುವಾಗ ದೇಶದಲ್ಲಿ ಶಾಂತಿ ನೆಲೆಸಲಿಕ್ಕಾಗಿ ಕಅ್‌ಬ್‌ನ ಪಿತೂರಿಯ ಕಾರಣದಿಂದ ಆತನನ್ನು ವಧೆಶಿಕ್ಷೆಗೆ ಅರ್ಹನೆಂದು ಹಝ್ರತ್ ಪೈಗಂಬರ್(ಸ) ವಿಧಿಸಿದರೆ, ಹಝ್ರತ್ ಪೈಗಂಬರ್(ಸ)ರ ತೀರ್ಪಿನ ಮೇಲೆ ನ್ಯಾಯಾಲಯದಲ್ಲಿ ಅಪೀಲು ಮಾಡಲು ಯಾರಿಗಾದರೂ ಹಕ್ಕು ಇರಲು ಹೇಗೆ ಸಾಧ್ಯ? ವಿಶೇಷವಾಗಿ ಕಅ್‌ಬ್‌ಗೆ ವಿಧಿಸಲಾದ ಈ ಶಿಕ್ಷೆಯನ್ನು ಆತನ ಅಪರಾಧಗಳ ಬೆಳಕಿನಲ್ಲಿ ಸರಿಯೆಂದು ಮನವರಿಕೆ ಮಾಡಿಕೊಂಡು ಯಹೂದಿಯರು ಸುಮ್ಮನಿದ್ದರು ಮತ್ತು ಅದರ ಬಗ್ಗೆ ಯಾವುದೇ ಆಕ್ಷೇಪ ಎತ್ತಲಿಲ್ಲ.

(ಹುಝೂರ್ ಹೇಳಿದರು:) ಈ ಕಾಲಾವಧಿಯಲ್ಲಿ ಹಝ್ರತ್ ಹಫ್‌ಸ(ರ)ರ ಎರಡನೇ ವಿವಾಹವೂ ನಡೆಯಿತು. ಅವರು ಹಝ್ರತ್ ಉಮರ್(ರ)ರ ಪುತ್ರಿಯಾಗಿದ್ದರು. ಅವರು ಓರ್ವ ನಿಷ್ಠಾವಂತ ಸಹಾಬಿಯಾದ ಖುನೈಸ್ ಬಿನ್ ಹುದ್ಧಾಫ(ರ)ರಿಗೆ ವಿವಾಹಿತರಾಗಿದ್ದರು. ಆ ಸಹಾಬಿ ಬದ್ರ್ ಯುದ್ಧದಿಂದ ಮರಳಿ ಬಂದ ನಂತರ ರೋಗಿಯಾದರು ಮತ್ತು ಆ ರೋಗದಿಂದ ಚೇತರಿಸಲಾಗದೇ ನಿಧನಗೊಂಡರು. ಹಝ್ರತ್ ಹಫ್‌ಸ(ರ)ರ ಪತಿಯ ಅಕಾಲಿಕ ಮರಣದ ಕಾರಣದಿಂದ ಅವರಿಗೆ ಉಂಟಾದ ದುಃಖವನ್ನು ದೂರ ಮಾಡಲಿಕ್ಕಾಗಿಯೂ, ಹಝ್ರತ್ ಉಮರ್(ರ)ರೊಡನೆ ಸಂಬಂಧವನ್ನು ಸುದೃಢಗೊಳಿಸಲಿಕ್ಕಾಗಿಯೂ ಮತ್ತು ಹಝ್ರತ್ ಹಫ್‌ಸ(ರ) ವಿದ್ಯಾವಂತರಾಗಿದ್ದರು ಎಂಬ ವಿಶೇಷತೆಯನ್ನು ಹೊಂದಿದ್ದರು ಎಂಬ ಕಾರಣದಿಂದ ಇಸ್ಲಾಮಿನ ಪ್ರಚಾರ ಮತ್ತು ಶಿಕ್ಷಣದ ಕೆಲಸವನ್ನು ವಿಸ್ತಾರಗೊಳಿಸಲಿಕ್ಕಾಗಿಯೂ ಹಝ್ರತ್ ಪೈಗಂಬರ್(ಸ) ಹಿಜರೀ 3, ಶಅ್‌ಬಾನ್ ತಿಂಗಳಲ್ಲಿ ಅವರೊಡನೆ ನಿಕಾಹ್ ಮಾಡಿಕೊಂಡರು. ಹಝ್ರತ್ ಹಫ್‌ಸ(ರ) ಸುಮಾರು 63ನೇ ವಯಸ್ಸಿನಲಿ ಹಿಜರೀ 45ರಲ್ಲಿ ನಿಧನಗೊಂಡರು.

ಹಿಜರೀ 2ರ ಘಟನೆಗಳಲ್ಲಿ ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮ(ರ)ರ ನಿಕಾಹಿನ ಬಗ್ಗೆ ಮುಂಚೆ ಪ್ರಸ್ತಾಪಿಸಲಾಗಿದೆ. ಅವರಿಗೆ ಹಿಜರೀ 3ರಲ್ಲಿ ಎಂದರೆ, ನಿಕಾಹಿನ ಹತ್ತು ತಿಂಗಳ ನಂತರ ಮಗು ಹುಟ್ಟಿತು. ಮಗುವಿಗೆ ಹಝ್ರತ್ ಪೈಗಂಬರ್(ಸ) ಹಸನ್ ಎಂದು ಹೆಸರಿಸಿದರು. ಈ ಬಗ್ಗೆ ಹಝ್ರತ್ ಪೈಗಂಬರ್(ಸ) ಒಮ್ಮೆ ಹೀಗೆ ಹೇಳಿದರು: ನನ್ನ ಈ ಮಗು ಸಯ್ಯದ್ ಆಗಿರುವರು; ಎಂದರೆ ಸರದಾರರಾಗಿರುವರು ಎಂದು. ಒಂದು ಕಾಲ ಬರುವುದು, ಆಗ ಮುಸ್ಲಿಮರ ಎರಡು ಗುಂಪುಗಳ ನಡುವೆ ಅಲ್ಲಾಹನು ಇವರ ಮೂಲಕ ಮೈತ್ರಿ ಉಂಟುಮಾಡುವನು. ಹೀಗೆ ಸರಿಯಾದ ಸಮಯದಲ್ಲಿ ಆ ಭವಿಷ್ಯವಾಣಿ ಈಡೇರಿತು.

(ಖುತ್ಬದ ಕೊನೆಯಲ್ಲಿ ಪೆಲಸ್ತೀನಿನ ಮುಸ್ಲಿಮರಿಗಾಗಿ ದುಆ ಮಾಡಲು ಹುಝೂರ್ ಪುನಃ ಮನವಿ ಮಾಡುತ್ತಾ ಹೀಗೆ ಹೇಳಿದರು:) ನಾನು ಅನೇಕ ಖುತ್ಬಗಳಲ್ಲಿ ಪೆಲಸ್ತೀನಿಯರಿಗಾಗಿ ದುಆ ಮಾಡಲು ಹೇಳುತ್ತಿದ್ದೇನೆ. ಇಂದು ಕೂಡ ಅದರದೇ ಬಗ್ಗೆ ಹೇಳಲು

ಬಯಸುತ್ತೇನೆ. ದುಆಗಳನ್ನು ಮುಂದುವರೆಸಿರಿ. ಈಗಂತು ದೌರ್ಜನ್ಯ ಮಿತಿಯನ್ನು ಮೀರುತ್ತಿದೆ. ಹಮಾಸಿನೊಂದಿಗೆ ಯುದ್ಧದ ಹೆಸರಲ್ಲಿ ಮುಗ್ಧ ಮಕ್ಕಳನ್ನು, ಮಹಿಳೆಯರನ್ನು, ವೃದ್ಧರನ್ನು ಮತ್ತು ರೋಗಿಗಳನ್ನು ಕೊಲ್ಲಲಾಗುತ್ತಿದೆ. ಯುದ್ಧದ ಎಲ್ಲ ವಿಧ ಮಾನದಂಡಗಳನ್ನು ಮತ್ತು ನಿಬಂಧನೆಗಳನ್ನು ಈ ನಾಮಧಾರಿ ನಾಗರಿಕ ಮತ್ತು ಸುಸಂಸ್ಕೃತ ಲೋಕವು ಕಡೆಗಣಿಸಿದೆ. ಅಲ್ಲಾಹನು ಮುಸ್ಲಿಂ ದೇಶಗಳಿಗೂ ವಿವೇಕವನ್ನು ನೀಡಲಿ. ಮುಸ್ಲಿಮರು ಒಂದಾಗಬೇಕೆಂದು 72, 73 ವರ್ಷಗಳ ಹಿಂದೆ ಹಝ್ರತ್ ಮುಸ್ಲಿಹ್ ಮೌಊದ್(ರ) ಎಚ್ಚರಿಸಿದ್ದರು. ಒಗ್ಗಟ್ಟಾಗಿ ಇರದೇ ಇದ್ದು ಒಂದೊಂದಾಗಿ ನಾಶವಾಗಬೇಕೇ ಅಥವಾ ಒಂದು ಅಸ್ತಿತ್ವವಾಗಿ ಇದ್ದು ಬಾಕಿಯುಳಿಯಬೇಕೇ ಎಂಬುದಾಗಿ ಸ್ವತಃ ತೀರ್ಮಾನಿಸಿರಿ ಎಂದು ಅವರು ಹೇಳಿದ್ದರು. ಈಗಲಾದರೂ ಈ ಜನರು ಈ ಮಾತನ್ನು ಮನವರಿಕೆ ಮಾಡಿದ್ದರೆ ಎಷ್ಟು ಚೆನ್ನ! ಸ್ಥಿತಿ ಎಂತಹದ್ದು ಆಗಿದೆ ಎಂದರೆ, ಪೆಲಸ್ತೀನ್ ಅಥವಾ ಇಸ್ರೇಲಿನ ಯುದ್ಧದ ಬಗ್ಗೆ ಯಾವುದೇ ಮಾತನ್ನು ಹೇಳಬಾರದು ಎಂದು ಉಮ್ರಾಗೆ ಹೋಗುವವರೊಡನೆ ಹೇಳಲಾಗುತ್ತಿದೆ ಎಂದು ನನ್ನೊಡನೆ ಒಬ್ಬರು ಹೇಳಿದ್ದರು. ವೀಸಾ ನೀಡುವಾಗ ಅಲ್ಲಿನ ಸರ್ಕಾರ ಈ ನಿರ್ದೇಶನವನ್ನು ನೀಡುತ್ತಿದೆ. ಈ ಮಾಹಿತಿ ಸರಿ ಎಂದಾದರೆ, ಇದು ಮುಸ್ಲಿಂ ಸರ್ಕಾರದ ಕಡೆಯಿಂದ ಅತ್ಯಂತ ಭೀರುತ್ವವಾಗಿದೆ. ಹೇಗಿದ್ದರೂ ಉಮ್ರಾದ ಆರಾಧನೆಯ ಹಕ್ಕನ್ನು ಈಡೇರಿಸಬೇಕು. ಆ ವೇಳೆ ಹೇಗಿದ್ದರೂ ಇಂತಹ ಯಾವುದೇ ವಿಧದ ಮಾತುಗಳು ಇರಬಾರದು. ಆದರೆ ಪೀಡಿತ ಪೆಲಸ್ತೀನಿಯರಿಗಾಗಿ ಅಲ್ಲಿ ಖಂಡಿತವಾಗಿಯೂ ದುಆ ಮಾಡಬೇಕು. ಅಲ್ಲಿಗೆ ಹೋಗುವವರು ಈ ದುಆಗಳನ್ನು ನೆನಪಿಟ್ಟುಕೊಳ್ಳುವುದಾದರೆ ಚೆನ್ನಾಗಿತ್ತು.

ಇತ್ತೀಚೆಗೆ ಮುಸ್ಲಿಂ ಸರ್ಕಾರಗಳು ಕೂಡ ಬಹಳ ದುರ್ಬಲವಾದ ಶಬ್ದವನ್ನು ಎತ್ತುತ್ತಿದೆ. ಕೆಲವು ಶಬ್ದಗಳು ಎದ್ದಿವೆ. ಅದಕ್ಕಿಂತ ಹೆಚ್ಚು ಶಕ್ತವಾದ ಶಬ್ಧವನ್ನು ಕೆಲವು ಮುಸ್ಲಿಮೇತರ ಜನರು, ರಾಜಕರಣಿಗಳು ಮತ್ತು ಸರ್ಕಾರಗಳು ಎತ್ತಿವೆ. ಅಲ್ಲಾಹನು ಮುಸ್ಲಿಮರಲ್ಲೂ ಧೈರ್ಯ ಮತ್ತು ವಿವೇಕವನ್ನು ಉಂಟುಮಾಡಲಿ. ವಿಶ್ವಸಂಸ್ಥೆಯ ಸೆಕ್ರಟರಿ ಜನರಲ್ ಕೂಡ ಉತ್ತಮವಾಗಿ ಹೇಳುತ್ತಿದ್ದಾರೆ. ಇತ್ತೀಚೆಗೆ ಅವರು ಬಹಳ ಉತ್ತಮವಾಗಿ ಮಾತನಾಡುತ್ತಿದ್ದಾರೆ. ಆದರೆ ಅವರ ಮಾತಿಗೆ ಯಾವುದೇ ಬೆಲೆಯಿಲ್ಲ ಎಂದು ತೋರುತ್ತಿದೆ. ಈ ಯುದ್ಧ ಇನ್ನಷ್ಟು ಹರಡಿದರೆ ಮತ್ತು ಜಾಗತಿಕ ಯುದ್ಧದ ಅವಸ್ಥೆ ಉಂಟಾದರೆ, ಯುದ್ಧ ಕೊನೆಗೊಳ್ಳುವುದರೊಂದಿಗೆ ವಿಶ್ವಸಂಸ್ಥೆ ಕೂಡ ಇಲ್ಲವಾಗುವುದು ಎಂದು ತೋರುತ್ತಿದೆ. ಅಲ್ಲಾಹನು ಲೋಕಕ್ಕೆ ಬುದ್ಧಿ ನೀಡಲಿ. ಈಗ ಲೋಕವು ತನ್ನ ನಾಶವನ್ನು ಬಹಳ ಸಮೀಪಕ್ಕೆ ತಂದಿದೆ ಎಂದು ತೋರುತ್ತಿದೆ. ಈ ನಾಶದ ನಂತರ ಬಾಕಿಯುಳಿಯುವ ಜನರಿಗೆ ಅಲ್ಲಾಹನು ವಿವೇಕವನ್ನು ನೀಡಲಿ. ಅವರು ಅಲ್ಲಾಹನ ಕಡೆಗೆ ಗಮನಿಸುವವರಾಗಲಿ ಮತ್ತು ಅವನ ಕಡೆಗೆ ಮರಳುವವರಾಗಲಿ. ಹೇಗಿದ್ದರೂ ನಾವು ಈ ಸಂಬಂಧವಾಗಿ ಬಹಳ ದುಆಗಳನ್ನು ಮಾಡಬೇಕಾಗಿದೆ. ಅಲ್ಲಾಹನು ಲೋಕದ ಮೇಲೆ ಕೃಪೆದೋರಲಿ. (ಆಮೀನ್).

*****

اَلْحَمْدُلِلّٰهِ نَحْمَدُهُ وَنَسْتَعِيْنُهُ وَنَسْتَغْفِرُهُ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***
*At,* ***'Masjid Mubarak',*** *Islamabad, Tilford, UK.* On 17-11-2023
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon